

ಅದೇ ಸಮಯಕ್ಕೆ 'ಮಗಳು ಜಾನಕಿ' ಧಾರಾವಾಹಿಯಲ್ಲಿ ನಟಿಸಲು ಅವಕಾಶ ಸಿಕ್ಕಿತು. ಆ ಪ್ರಾಜೆಕ್ಟಿನಿಂದ ಹೊರಬಂದು ಧಾರಾವಾಹಿ ನಟನೆಯಲ್ಲಿ ತೊಡಗಿಕೊಂಡೆ'' ಎಂದ ಸಿನಿಮಾ ಜಗತ್ತಿನಲ್ಲಿ ಇಟ್ಟ ಮೊದಲ ಹೆಜ್ಜೆಯಲ್ಲಿಯೇ ಮುಳ್ಳು ಚುಚ್ಚಿಸಿಕೊಂಡ ಕಹಿ ಅನುಭವವನ್ನು ನೆನಪಿಸಿಕೊಳ್ಳುತ್ತಾರೆ.

'ಮಗಳು ಜಾನಕಿ' ಧಾರಾವಾಹಿಯ ಅನುಭವವನ್ನು ವಿಶೇಷವಾಗಿ ಸ್ಮರಿಸಿಕೊಳ್ಳುವ ಗಾನವಿ, ಈಗ ರಿಷಭ್ ಶೆಟ್ಟಿ ಅವರೊಂದಿಗೆ ನಟಿಸಿದ 'ಹೀರೊ' ಸಿನಿಮಾದ ಬಿಡುಗಡೆಯ ನಿರೀಕ್ಷೆಯಲ್ಲಿ ಅವರಿದ್ದಾರೆ. 'ಹೀರೊ ಸಿನಿಮಾದಲ್ಲಿ ನಟಿಸಿದ ಅನುಭವ ಚೆನ್ನಾಗಿತ್ತು. ಆ ನಿರ್ದೇಶಕರಿಗಿದು ಮೊದಲ ಸಿನಿಮಾ. ಆದರೆ ಬಹುಶಃ ಅವರು ಮನಸಲ್ಲೇ ಹತ್ತಾರು ಸಿನಿಮಾಗಳನ್ನು ತೆಗೆದುಬಿಟ್ಟಿದ್ದಾರೆ ಅನಿಸುತ್ತದೆ. ಅವರ ಕೆಲಸದಲ್ಲಿ ಆ ಅನುಭವ ಎದ್ದು ಕಾಣುತ್ತಿತ್ತು. ಏನು ಮುಖ್ಯ, ಯಾವುದು ಮುಖ್ಯವಲ್ಲ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿದೆ' ಎಂದು ಹೊಗಳುತ್ತಾರೆ.

'ಹೀರೊ' ಸಿನಿಮಾದ ನಂತರ ಇನ್ನೂ ಕೆಲವು ಸ್ಕ್ರಿಪ್ಟ್‌ಗಳನ್ನು ಅವರು ಕೇಳಿದ್ದಾರೆ. ಆದರೆ ಅವ್ಯಾವುದೂ ಅವರಿಗೆ ಇಷ್ಟವಾಗಿಲ್ಲ. 'ಎಂಥದ್ದೇ ಪಾತ್ರಗಳಿಗೆ ನನ್ನನ್ನು ನಾನು ಒಗ್ಗಿಸಿಕೊಳ್ಳಬಲ್ಲೆ ಎಂಬ ವಿಶ್ವಾಸ ಬಂದ ಮೇಲೆಯೇ ನಾನು ಈ ಕ್ಷೇತ್ರಕ್ಕೆ ಬಂದಿದ್ದು. ಇಲ್ಲವಾದರೆ ಎಷ್ಟೋ ಹಿಂದೆಯೇ ನಟನೆಗೆ ಇಳಿಯಬಹುದಿತ್ತು. ನನಗೆ ವಿಶ್ವಾಸ ಇರುವುದರಿಂದ ಸವಾಲಿನ ಪಾತ್ರಗಳನ್ನೇ ನಾನು ನಿರೀಕ್ಷಿಸುತ್ತೇನೆ. ಆ ನಟನೆಯಲ್ಲಿ ಎಕ್ಸೈಟಿಂಗ್ ಇರಬೇಕು. ನಾನು ಯಾವುದೇ ಕೆಲಸ ಮಾಡಲಿ. ಅದು ನನಗೆ ಥ್ರಿಲ್ ಕೊಡಬೇಕು. ಇಲ್ಲದಿದ್ದರೆ ಲೈಫು ಬೋರಾಗಿಬಿಡುತ್ತದೆ' ಎಂದು ನಟನೆಗೂ ಹೊಂದಿಕೊಂಡಿರುವ ತಮ್ಮ ಬದುಕತತ್ವದ ಕುರಿತು ಗಾನವಿ ಮಾತಾಡುತ್ತಾರೆ.

ಸದ್ಯಕ್ಕೆ ನಟನೆಯನ್ನೇ ನೆಚ್ಚಿಕೊಂಡಿರುವ ಗಾನವಿ, 'ಮುಂದೆ ನಟನೆ ಸಾಕು ಅನಿಸಿ ನಿರ್ದೇಶನವೋ ಇನ್ಯಾವುದೋ ಎಕ್ಸೈಟಿಂಗ್ ಅನಿಸಬಹುದು. ಆಗ ಅದನ್ನು ಮಾಡುತ್ತೇನೆ. ಮುಂದೆ ಏನು ಮಾಡುತ್ತೇನೆ, ಯಾವಾಗ ಮಾಡುತ್ತೇನೆ ಎಂದು ಈಗಲೇ ಹೇಳುವುದು ಕಷ್ಟ ನನಗೆ. ಆಯಾ ಹಂತದಲ್ಲಿ ಯಾವುದು ಎಕ್ಸೈಟಿಂಗ್ ಅನಿಸುತ್ತದೆಯೋ ಅದನ್ನು ಮಾಡುತ್ತಹೋಗುತ್ತೇನೆ' ಎನ್ನುತ್ತಾರೆ. 'ಹೀರೊ' ಸಿನಿಮಾ ನಂತರ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚುವ ಇನ್ನಷ್ಟು ಅವಕಾಶಗಳು ಬರುವ ನಿರೀಕ್ಷೆಯಲ್ಲಿ ಅವರಿದ್ದಾರೆ. ■

# ಕಿಶನ್ - ಸಾತ್ವಿಕಾ ಡಿಯರ್ ರೊಮ್ಯಾನ್ಸ್!

ಬಿಗ್ ಬಾಸ್ ಮನೆಗೆ ಹೋಗಿ ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿರುವ ಡಾನ್ಸರ್ ಕಿಶನ್, ಈಗ ನಾಯಕ ನಟನಾಗಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅವರ ಜೊತೆಗೆ ತೆರೆಯನ್ನು ಹಂಚಿಕೊಳ್ಳುತ್ತಿರುವುದು ಸಾತ್ವಿಕಾ. ಹಾ, ಸಾತ್ವಿಕಾ ಅಂದರೆ ತಕ್ಷಣಕ್ಕೆ ಯಾರು ಎಂಬ ಪ್ರಶ್ನೆ ಮೂಡಬಹುದು. ರೇಖಾದಾಸ್ ಮಗಳು ಶ್ರಾವ್ಯ ಈಗ ಸಾತ್ವಿಕಾ ಆಗಿದ್ದಾಳೆ. ಹೀಗೆ ಹೆಸರು ಬದಲಿಸಿಕೊಂಡಿರುವುದರ ಹಿಂದೆಯೂ ಅದೃಷ್ಟ ಕೈ ಹಿಡಿಯುವ ಹಂಬಲ ಇದೆಯೆಂದು ಬೇರೆ ಹೇಳಬೇಕಿಲ್ಲವಷ್ಟೆ.

ವಿಸ್ಮಯಾ ಗೌಡ ಅವರು ನಿರ್ಮಾಣ ಮತ್ತು ನಿರ್ದೇಶನ ಮಾಡುತ್ತಿರುವ ಸಿನಿಮಾದಲ್ಲಿ ಇವರಿಬ್ಬರೂ ಜೊತೆಯಾಗಿ ನಟಿಸುತ್ತಿರುವುದು ಸುದ್ದಿಯಾಗಿತ್ತು. ಆದರೆ ಆ ಚಿತ್ರಕ್ಕೆ ಶೀರ್ಷಿಕೆ ಪಕ್ಕಾ ಆಗಿರಲಿಲ್ಲ. ಇತ್ತೀಚೆಗೆ ನಟ ಸುದೀಪ್ ಚಿತ್ರದ ಶೀರ್ಷಿಕೆಯನ್ನು ಅನಾವರಣಗೊಳಿಸಿ ತಂಡಕ್ಕೆ ಶುಭ ಹಾರೈಸಿದ್ದಾರೆ. ಚಿತ್ರದ ಹೆಸರು 'ಡಿಯರ್ ಕಣ್ಮಣಿ'.

ವಾಸುಕಿ ವೈಭವ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಮಧುಸೂದನ್ ಕ್ಯಾಮೆರಾ ಕೈಚಳಕ ಇರಲಿದೆ. ಗೌಸ್‌ಪೀರ್, ಸಚಿನ್, ಜಯಂತ ಕಾಯ್ಕಿಣಿ ಹಾಡುಗಳನ್ನು ಬರೆದಿದ್ದಾರೆ.

ಕೆಲವು ವರ್ಷಗಳ ಮಣಿರತ್ನಂ ನಿರ್ದೇಶನದ 'ಓಕೆ ಕಣ್ಮಣಿ' ಸಿನಿಮಾ ತೆರೆಗೆ ಬಂದಿದ್ದು ನಿಮಗೆಲ್ಲ ನೆನಪಿರಬಹುದು. ರೊಮ್ಯಾಂಟಿಕ್ ಲವ್ ಸ್ಟೋರಿ ಹೊಂದಿದ್ದ ಮಣಿರತ್ನಂ ಅವರ ಓಕೆ ಕಣ್ಮಣಿಗೂ ಕನ್ನಡದ ಡಿಯರ್ ಕಣ್ಮಣಿಗೂ ಶೀರ್ಷಿಕೆಯಲ್ಲಿಯಂತೂ ಹೋಲಿಕೆ ಇದೆ. ಇದರ ಪೋಸ್ಟರ್‌ಗಳೂ ಇದರಲ್ಲಿ ಸಖತ್ ರೊಮ್ಯಾನ್ಸ್ ಇರಲಿದೆ ಎಂದು ಸಾರಿ ಹೇಳುತ್ತಿವೆ. ಶೀರ್ಷಿಕೆಯಲ್ಲಿನ ಹೋಲಿಕೆ ಸಿನಿಮಾ ಕಥೆಯಲ್ಲಿಯೂ ಇರುತ್ತದಾ ಎಂಬುದನ್ನು ಕಾದುನೋಡಬೇಕಷ್ಟೆ. ■

